**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 26 ಪ್ರಾ.ಸಾ. : 12**

| | |
|---|---|
| ಸಾಕ್ಷಿಯ ಹೆಸರು | : ರಾಮಚಂದ್ರ |
| ತಂದೆಯ ಹೆಸರು | : ಹನುಮಾ ನಾಯ್ಕ |
| ವಯಸ್ಸು | : 71 ವರ್ಷ |
| ಉದ್ಯೋಗ | : ನಿವೃತ್ತಿ ಜೀವನ |
| ವಾಸ | : ಕಾನಗೋಡು , ಸಿದ್ದಾಪುರ ತಾಲೂಕು |

**ದಿನಾಂಕಃ 09-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹಿಂದೆ ಗಾರೆಕೆಲಸ ಮಾಡುತ್ತಿದ್ದೆ . ಈಗ ವಯಸ್ಸಾಗಿರುವುದರಿಂದ ಮತ್ತು ಅಪಘಾತಕ್ಕೆ ಒಳಗಾಗಿರುವುದರಿಂದ ಏನೂ ಕೆಲಸ ಮಾಡುತ್ತಿಲ್ಲ. ಮನೆಯಲ್ಲಿ ಸುಮ್ಮನೆ ಇದ್ದೇನೆ. ನಾನು ಕಾನಗೋಡು ಗ್ರಾಮದಲ್ಲಿ ಜನಿಸಿರುತ್ತೇನೆ. 2001-2002 ರಲ್ಲಿ ಕಾನಗೋಡು ಗ್ರಾಮ ಪಂಚಾಯತಿಯಿಂದ ವೈಯಕ್ತಿಕ ಶೌಚಾಲಯ ಫಲಾನುಭವಿಗಳು ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ನಿರ್ಮಿಸಿಕೊಂಡಿರುವವರೆಗೆ ತಲಾ ರೂ. 3000/- ಸಹಾಯ ಧನ ಕೊಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ ನಾನು ಫಲಾನುಭವಿ ಎಂದು ಪಟ್ಟಿಯಲ್ಲಿ ಹೆಸರು ಇದೆಯಾ ಎಂದರೆ ನಾನು ಸಹಾಯ ಧನ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದೆ . ನನಗೆ ರೂ. 3000/- ಸಹಾಯ ಧನವನ್ನು ಗ್ರಾಮ ಪಂಚಾಯತಿಯವರು ಪಾವತಿ ಮಾಡಿರುವುದಿಲ್ಲ. ನನ್ನ ಮನೆಗೆ ಆಗ ಶೌಚಾಲಯ ಇರಲಿಲ್ಲ. ನಾನು ಶೌಚಾಲಯ ನಿರ್ಮಾಣ ಮಾಡಿಕೊಳ್ಳಲಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

2. ನನಗೆ 2021-22 ರಲ್ಲಿ ಮನೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರು ಆಗಿರುತ್ತದೆ . ನಾನು 2001-2002 ರಲ್ಲಿ ಮನೆ ಬೇಕು ಎಂದು ಅರ್ಜಿ ಕೊಟ್ಟಿದ್ದೆ . ನಾನು ಕೊಟ್ಟಿದ್ದ ಅರ್ಜಿಯನ್ನು ಲೋಕಾಯುಕ್ತ ಪೊಲೀಸ್ ನವರು ಪಡೆದುಕೊಂಡಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೊಲೀಸ್ ನವರಿಗೆ ಕೊಟ್ಟಿಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ